© 2022 IJNRD | Volume 7, Issue 7 July 2022 | ISSN: 2456-4184 | IJNRD.ORG

IJNRD.ORG ISSN : 2456-4184
INTERNATIONAL JOURNAL OF NOVEL RESEARCH AND DEVELOPMENT (IJNRD) | IJNRD.ORG
An International Open Access, Peer-reviewed, Refereed Journal

# ಅಜಗಣ್ಣನ ಅನುಜೆ ನಿಜಶರಣೆ ಮುಕ್ತಾಯಕ್ಕ

**ಡಾ. ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

ಕನ್ನಡ ನಾಡಿನ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನವು ಒಂದು ಅಪೂರ್ವ ಘಟ್ಟ, ಆರ್ಥಿಕ, ಸಾಮಾಜಿಕ, ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ರಂಗದಲ್ಲಿ ಚಿರಸ್ಥಾಯಿಯಾಗಬಲ್ಲ 'ಚಲನಶೀಲ ಚಿರಂತನ ಸಂಸ್ಕೃತಿ'ಯೊಂದನ್ನು ಹುಟ್ಟು ಹಾಕಿದ್ದು ಈ ಕಾಲ ಘಟ್ಟದ ವೈಶಿಷ್ಟತೆ. ಈ ಸಂಸ್ಕೃತಿಯ ನಿರ್ಮಾತೃಗಳಾದ ಶರಣರು ಏಕಕಾಲಕ್ಕೆ ಚಿಂತನಶೀಲತೆ ಹಾಗೂ ಕ್ರಿಯಾತ್ಮಕತೆ ಎಂಬ ಬೀಜಗಳನ್ನು ನೆಟ್ಟು, ಸಾರ್ವಕಾಲಿಕ ಮೌಲ್ಯದ 'ವಚನ ಸಾಹಿತ್ಯ' ಎಂಬ ಪುಷ್ಪ ಫಲಗಳನ್ನು, ಮುತ್ತು ರತ್ನಗಳನ್ನು, ನೀಡಿದ್ದು ಗಮನಾರ್ಹ ಸಂಗತಿ. ನಾಡಿನಲ್ಲಿ ಎಲ್ಲೆಡೆ ಹರಡಿದ್ದ ಶಿವಶರಣರೆಂಬ ಮುತ್ತು ರತ್ನಗಳನ್ನು ಕಲ್ಯಾಣದಡೆಗೆ ಆಕರ್ಷಿಸಿ ಅನುಭವ ಮಂಟಪವೆಂಬ ಕಾರ್ಯಾಗಾರದಲ್ಲಿ ಸಾಣೆ ಹಿಡಿದು ಅವರ ಅನುಭಾವದ ಪ್ರತೀಕಗಳಾದ ವಚನಗಳನ್ನು ಮುಂದಣ ಜಗತ್ತಿಗೆ ದಾರಿ ದೀಪವಾಗಿ ನೀಡಿದ ಬಸವಣ್ಣನವರು ಒಂದೆಡೆಯಾದರೆ, ಅಂತಹ ಶಿವಶರಣರೆಂಬ ಮುತ್ತು ರತ್ನಗಳನ್ನು ಅವರಿರುವ ಮೂಲ ಸ್ಥಾನಗಳಿಗೆ ಹೋಗಿ ಅಂದರೆ ವಜ್ರದ ಗಣಿಗಳಿಗೆ ಹೋಗಿ ಅವರನ್ನು ಪರೀಕ್ಷಿಸಿ ಒರೆಗೆ ಹಚ್ಚಿ ಪರೀಕ್ಷಿಸಿ ಗುರುತಿಸಿ ಅವರನ್ನು ಕರೆತಂದು ಅನುಭವ ಮಂಟಪವೆಂಬ ಕಾರ್ಯಾಗಾರಕ್ಕೆ ಸೇರಿಸಿದ ಕೀರ್ತಿ ಅಲ್ಲಮಪ್ರಭುವಿಗೆ ಸಲ್ಲುತ್ತದೆ. ಈ ರೀತಿ ಕಲ್ಯಾಣದಿಂದ ಬಹು ದೂರದ ಲಕ್ಕುಂಡಿಗೆ ಸೇರಿದ ವಜ್ರದ ಕಲ್ಲೊಂದನ್ನು ತಂದು ಅದನ್ನು ಸಾಣೆ ಹಿಡಿದು ವಚನ ಮೂರ್ತಿಯಾಗಿ ಶಿವಶರಣೆ ಯಾಗಿ ರೂಪಿಸಿದ್ದು ಅಲ್ಲಮಪ್ರಭು. ಆ ರೀತಿ ಅಲ್ಲಮನ ವೈಚಾರಿಕ ಪರೀಕ್ಷೆಯಲ್ಲಿ ಪೂರ್ವಾಶ್ರಮದ ಮೋಹ ಬಂಧನಗಳಿಂದ ಮುಕ್ತಗೊಂಡು ಮುಕ್ತಳಾದವರು ಶಿವಯೋಗಿ ಸೊನ್ನಲ್ಲಿಗೆಯ ಸಿದ್ದರಾಮ ಹಾಗೂ ಜ್ಞಾನ ಸಂಪನ್ನೆ ಮುಕ್ತಾಯಕ್ಕ.

ಶರಣ ಸಮುದಾಯದ ಸ್ತ್ರೀಯರಲ್ಲಿ ವೈರಾಗ್ಯನಿಧಿ ಅಕ್ಕಮಹಾದೇವಿಯ ತರುವಾಯ ಎದ್ದು ಕಾಣುವ ಹೆಸರು ಅರಿವಿನ ಆಗರವಾದ ಸುಜ್ಞಾನಿ ಮುಕ್ತಾಯಕ್ಕನದು. ಮುಕ್ತಾಯಿ, ಮುಕ್ತಾಯಕ್ಕ ಎಂಬ ಹೆಸರುಗಳಿಂದ ಪ್ರಸಿದ್ಧಳಾದ ಈ ಶರಣೆ ಬದುಕಿದ ಕಾಲ ಸು. ಕ್ರಿ.ಶ. 1160. ಅಜಗಣ್ಣ ಎಂಬ ಹೆಸರಿನ ಶರಣನ ಸೋದರಿಯಾದ ಈಕೆ ಒಬ್ಬ ಶ್ರೇಷ್ಠ ವಚನಕಾರ್ತಿಯೂ ಹೌದು. ಅಜಗಣ್ಣ ತಂದೆ ಎಂಬ ಮುದ್ರಿಕೆಗಳಿಂದ 37 ವಚನಗಳನ್ನು ಬರೆದ ಮುಕ್ತಾಯಕ್ಕನ ಅನುಭಾವಿಕ ನೆಲೆ ಶಿವಶರಣೆಯಲ್ಲಿ ಎದ್ದು ಕಾಣುವಂತಹದು. ಇವಳ ಬದುಕಿಗೆ ಸಂಬಂಧಿಸಿದ ಚಾರಿತ್ರಿಕ ಅಂಶಗಳು ಕೆಲಮಟ್ಟಿಗೆ ಕಂಡುಬರುವುದು ಶೂನ್ಯ ಸಂಪಾದನೆ ಮತ್ತು ಆ ಪರಂಪರೆಗೆ ಸೇರಿದ ಕೆಲವು ಕೃತಿಗಳಲ್ಲಿ ಮಾತ್ರ. ಇವಳ ತವರೂರು ಗದುಗಿನ ಹತ್ತಿರದ ಲಕ್ಕುಂಡಿ ಎಂಬುದಾಗಿಯೂ ಪತಿಯ ಊರು ಈಗಿನ ರಾಯಚೂರು ಜಿಲ್ಲೆಯ ಮೊಸಳೆಕಲ್ಲು ಅಥವಾ ಮಸರಕಲ್ಲು ಎಂಬುದಾಗಿ ಕಾವ್ಯಗಳು ತಿಳಿಸುತ್ತವೆ. ಆದರೆ ಇವಳ ಸೋದರನಾದ ಅಜಗಣ್ಣನ ವಚನ ಮುದ್ರಿಕೆ 'ಮಹಾಗಣ ಸೋಮೇಶ್ವರ' ಎಂದು ಇತ್ತೀಚಿಗೆ ತಿಳಿದುಬಂದಿದ್ದು ಈ ಹೆಸರಿನ ದೇವಾಲಯ

ಲಕ್ಕುಂಡಿಯಲ್ಲಿ ಇರುವುದು ವಿಶೇಷ. ಹೀಗಾಗಿ ಮುಕ್ತಾಯಕ್ಕಗಳ ತವರೂರು ಈಗಿನ ಗದುಗಿನ ಹತ್ತಿರ ಇರುವ ಸುಪ್ರಸಿದ್ಧ ಲಕ್ಕುಂಡಿ ಎಂದು ಈಗ ಸ್ಪಷ್ಟವಾಗಿದೆ.

ಮುಕ್ತಾಯಕ್ಕನ ಆತ್ಮವಿಕಾಸದಲ್ಲಿ ಅಮಳೋಕ್ಯಲಿಂಗಿಯಾಗಿದ್ದ ಅಣ್ಣ ಅಜಗಣ್ಣನ ಪಾತ್ರ ಅತ್ಯಂತ ಮಹತ್ವದ್ದು. ಬಾಲ್ಯದಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡಿದ್ದ ಮುಕ್ತಾಯಕನಿಗೆ ಅಣ್ಣನೇ ತಂದೆ ತಾಯಿಯಾಗಿ ಬೆಳೆಸಿದ್ದನು. ಹೀಗಾಗಿ ಅವಳಿಗೆ ಅಣ್ಣನೇ ಸರ್ವಸ್ವ. ಅವಳಿಗೆ ಅಕ್ಷರ ಜ್ಞಾನವನ್ನು ನೀಡಿ ಅರಿವಿನ ಆಗರವನ್ನಾಗಿಸಿದವನೂ ಅಣ್ಣನೇ. ಒಂದು ಕಡೆಗೆ ಅಣ್ಣ-ತಂಗಿಯ ರಕ್ತ ಸಂಬಂಧ, ಇನ್ನೊಂದು ಕಡೆಗೆ ಗುರು-ಶಿಷ್ಯರ ಅವಿನಾಭಾವ ಸಂಬಂಧ. ಅಜಗಣ್ಣ- ಮುಕ್ತಾಯಕ್ಕನ ಚರಿತ್ರೆ ಎಂದರೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆಕೆಯ ಒಟ್ಟು ಮೂವತ್ತೇಳು ವಚನಗಳಲ್ಲಿ ಒಂದು ವಚನವಂತೂ ಸಂಪೂರ್ಣವಾಗಿ ಅಜಗಣ್ಣನ ವ್ಯಕ್ತಿತ್ವವನ್ನು ಭವ್ಯ ಪ್ರತಿಮೆಯಾಗಿ ಕಡೆದು ನಿಲ್ಲಿಸಿದಂತಿದೆ. ಅಜಗಣ್ಣ ಮತ್ತು ಮುಕ್ತಾಯಕ್ಕ ಇಬ್ಬರೂ ವಚನ ರಚನೆ ಮಾಡಿದ್ದಾರೆ. ಅಣ್ಣನನ್ನೇ ಗುರುವಾಗಿ ಸ್ವೀಕರಿಸಿದ ಮುಕ್ತಾಯಕ್ಕ ಆ ಹೆಸರನ್ನೇ ತನ್ನ ಮುದ್ರಿಕೆಯಾಗಿ ಇಟ್ಟುಕೊಂಡದ್ದು ಸಹಜವಾಗಿದೆ. ಗುಪ್ತ ಭಕ್ತನಾಗಿದ್ದ ಅಜಗಣ್ಣ ಇತರರಂತೆ ಲಿಂಗವನ್ನು ದೇಹದ ಮೇಲೆ ಧರಿಸದೆ ಅಮಲೋಕ್ಯ ಲಿಂಗಿಯಾಗಿದ್ದ ಎಂಬುದು ತಿಳಿದು ಬರುತ್ತದೆ, ಅಮಳೋಕ್ಯ ಎಂದರೆ ಲಿಂಗ ಪೂಜೆಯ ನಂತರ ಲಿಂಗವನ್ನು ಬಾಯಲ್ಲಿಯೇ ಧರಿಸುವುದು ಎಂದರ್ಥ ಅಂದರೆ ಈತ ಓರ್ವ ಗುಪ್ತ ಭಕ್ತನಾಗಿ ಲಿಂಗ ಪೂಜಾ ನಿರತನಾಗಿದ್ದನೆಂಬುದಾಗಿ ತಿಳಿದುಬರುತ್ತದೆ. ಒಮ್ಮೆ ಓಣಿಯಲ್ಲಿ ಆಟವಾಡುತ್ತಿದ್ದ ಮಕ್ಕಳು ಇವನ ಬಾಯಿಯೊಳಗೆ ಇರುವ ಆ ಲಿಂಗವನ್ನು ನೋಡಿ ತಮಗೆ ಬೇಕೆಂದು ಒತ್ತಾಯಿಸಲಾಗಿ ಅದನ್ನು ನುಂಗಿ ಲಿಂಗೈಕ್ಯನಾದನೆಂದು ಕೆಲವು ಕಾವ್ಯ ಕೃತಿಗಳು ಹೇಳಿದರೆ ಮತ್ತೆ ಕೆಲವು ಕಾವ್ಯ ಕೃತಿಗಳು ಈತ ಓರ್ವ ಕೃಷಿಕನಾಗಿದ್ದು ಕೃಷಿ ಕಾಯಕದಲ್ಲಿ ನಿರತನಾಗಿದ್ದಾಗ ರಾಶಿ ಮಾಡಿ ಚೀಲವನ್ನು ಹೊತ್ತು ತರುವಾಗ ಬಾಗಿಲು ತಲೆಗೆ ಬಡಿಯಲಾಗಿ ಲಿಂಗೈಕ್ಯನಾದನೆಂದು ಹೇಳುತ್ತವೆ. ಅದೇನೇ ಇದ್ದರೂ ಈತ ಲಿಂಗೈಕನಾದ ಪ್ರಸಂಗದಲ್ಲಿ ಮುಕ್ತಾಯಕ್ಕ ವ್ಯಕ್ತಪಡಿಸಿದ ಭಾವನಾತ್ಮಕ ಅಂಶಗಳು ಮುಕ್ತಾಯಕ್ಕನ ತೀವ್ರವಾದ ನೋವಿನಿಂದ ಕೂಡಿದ ಅಳಲಿನ ಯಾತನೆಯನ್ನು ಅನುಭಾವದ ವಚನಗಳಾಗಿ ಹೊರಹೊಮ್ಮಿಸಿವೆ. ಅಣ್ಣನ ಶವವನ್ನು ತೊಡೆಯ ಮೇಲಿಟ್ಟುಕೊಂಡು ದುಃಖಿಸುತ್ತಲ್ಲಿದ್ದ ಅವಳನ್ನು ಸಂಧಿಸಿದ ಅಲ್ಲಮ ಪ್ರಭುದೇವ ಅವಳನ್ನು ಸಮಾಧಾನ ಪಡಿಸುತ್ತಲೇ ಅವಳಿಗೆ ಜೀವನದ ನಿತ್ಯಾನಿತ್ಯತೆ, ಅನುಭಾವಿಯ ನಿಲುವು, ಮೊದಲಾದವುಗಳಿಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಹಾಕುತ್ತಾನೆ. ಅದಕ್ಕೆ ಅಷ್ಟೇ ಎತ್ತರದ ಉತ್ತರವನ್ನು ಕೊಡುತ್ತಾಳೆ ಮುಕ್ತಾಯಕ್ಕ. ಬಹುಶಃ ಎಲ್ಲ ವಚನಕಾರ್ತಿಯರಲ್ಲಿಯೇ ಇಷ್ಟು ಎತ್ತರದ ಅನುಭವದ ನಿಲುವಿನಲ್ಲಿ ನಿಂತು ಮಹಾಜ್ಞಾನಿಯಾದ ಅಲ್ಲಮನನ್ನು ಎದುರಿಸಿದವರು ಮತ್ತೊಬ್ಬರಿಲ್ಲ ಎಂದೆನಿಸುತ್ತದೆ.

ಮುಕ್ತಾಯಕ್ಕನ ಬದುಕಿನಲ್ಲಿ ಅಣ್ಣ ಅಜಗಣ್ಣನ ಪ್ರಭಾವ ಅತ್ಯಂತ ಹಿರಿದಾದದ್ದು. ಅವಳ ಒಂದು ವಚನವಂತೂ ಅಜಗಣ್ಣನ ವ್ಯಕ್ತಿತ್ವದ ಮಹತಿಯನ್ನು ಎತ್ತಿ ತೋರಿಸುತ್ತದೆ. ಅವಳಿಗೆ ಜ್ಞಾನ ಅರಿವನ್ನು ನೀಡಿದ ಗುರುವಾಗಿ ಹೆತ್ತ ತಂದೆಯಂತೆ ಸಾಕಿ ಪೊರೆದ ಅಣ್ಣನಾಗಿ ಆಧ್ಯಾತ್ಮಿಕ ಗುರುವಾಗಿ ಅವಳನ್ನು ಬೆಳೆಸಿದ ರೀತಿ ಅವಳ ಹಲವಾರು ವಚನಗಳಲ್ಲಿ ಎದ್ದು ಕಾಣುತ್ತದೆ. ಬ್ರಹ್ಮರಂಧ್ರದಲ್ಲಿ ಗುರು, ಭ್ರೂಮಧ್ಯದಲ್ಲಿ ಲಿಂಗ, ಹೃದಯದಲ್ಲಿ ಜಂಗಮಮೂರ್ತಿಯಾಗಿದ್ದ ಅಜಗಣ್ಣನ ಕುರಿತಾದ ಭಕ್ತಿ-ಭಾವದ ಅಭಿವ್ಯಕ್ತಿಗಳು ಈ ವಚನದಲ್ಲಿ ಅತ್ಯಂತ ಉತ್ಕಟವಾಗಿವೆ. ಅಂತೆಯೇ, ಶಿವಗಣ ಸಂಚಿತ ಶಿವಯೋಗಿ ಅಜಗಣ್ಣದೇವರು (24), ಸಮತೆಯಾಗಿ ನಿಂದ ಅಜಗಣ್ಣಂಗೆ ಇನ್ನಾರು ಸರಿ(25), ಚಿದ್ಘನದೊಳಗೆ ಅವಿರಳೈಕ್ಯನಾದ ಎನ್ನ ಅಜಗಣ್ಣ ತಂದೆ (21), ಮದವಳಿದು ಮಹವನೊಡಗೂಡಿದ ಎನ್ನ ಅಜಗಣ್ಣ (20), ಅರಿವಡೆ ಮತಿಯಿಲ್ಲ ನೆನೆವಡೆ ಮನವಿಲ್ಲ ಎನ್ನ ಅಜಗಣ್ಣ ತಂದೆ (5), ತತ್ವಜ್ಞಾನ ಅಜಗಣ್ಣನೆ, ತತ್ವಮಯನು ಅಜಗಣ್ಣನೆ (11), ಉಪಮಾತೀತ ಅಜಗಣ್ಣನು, ವಾಙ್ಮನಕ್ಕತೀತ ಅಜಗಣ್ಣನು (4) ಈ ಮುಂತಾದ ವಾಕ್ಯಗಳು ಅನುಭಾವಿ ಅಜಗಣ್ಣನ ಅನುಭಾವದೆತ್ತರವನ್ನು ಬೆಳಗುವ ಜ್ಯೋತಿ ಪ್ರಭೆಗಳಾಗಿವೆ. ಜಗತ್ತಿನ ಇತಿಹಾಸದಲ್ಲಿ ಒಡಹುಟ್ಟಿದ ಅಣ್ಣ-ತಂಗಿ ಗುರು-ಶಿಷ್ಯೆಯಾಗಿರುವುದಕ್ಕೆ ಅಜಗಣ್ಣ ಮುಕ್ತಾಯಕ್ಕಗಳು ಏಕೈಕ

ಉದಾಹರಣೆಯಾಗುತ್ತಾರೆ. ಈ ಎಲ್ಲ ಕೃತಜ್ಞತೆಯ ದ್ಯೋತಕವಾಗಿಯೇ ಮುಕ್ತಾಯಕ್ಕನ ವಚನಗಳ ಅಂಕಿತ 'ಅಜಗಣ್ಣ', 'ಅಜಗಣ್ಣ ತಂದೆ' ಎಂದಿರುವದು ಆಶ್ಚರ್ಯವೇನಲ್ಲ.

ಈ ಇಬ್ಬರ ಕುರಿತಂತೆ ಅನೇಕ ಶರಣರು ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ. ಮುಂದೆ ಬಂದ ವೀರಶೈವ ಕವಿಗಳೂ ಕೂಡಾ ಇವರನ್ನು ಸ್ತುತಿಸಿದ್ದಾರೆ. ಶೂನ್ಯ ಸಂಪಾದನೆಕಾರರು 'ಮುಕ್ತಾಯಕ್ಕಗಳ ಸಂಪಾದನೆ' ಎಂದು ಒಂದು ಪ್ರತ್ಯೇಕ ಅಧ್ಯಾಯವನ್ನೇ ಸೃಷ್ಟಿಸಿ, ಅಲ್ಲಿ ಜ್ಞಾನಮೂರ್ತಿ ಅಲ್ಲಮಪ್ರಭು ಹಾಗೂ ಮುಕ್ತಾಯಕ್ಕಗಳ ನಡುವೆ ಮುಕ್ತಚರ್ಚೆಗೆ ಅವಕಾಶ ಕಲ್ಪಿಸಿದ್ದಾರೆ. ಆಧ್ಯಾತ್ಮಿಕ ಜಿಜ್ಞಾಸೆಯ ಚಿಂತನ ಮಂಥನದಲ್ಲಿ ಪ್ರಬುದ್ಧ ಮನಸ್ಸಿನ, ಜ್ಞಾನ ಶಿಖರಾರೋಹಿಣಿ ಸ್ತ್ರೀ ಮುಕ್ತಾಯಕ್ಕನ ದರ್ಶನವನ್ನು ಮಾಡಿಸಿದ್ದಾರೆ. ಮುಕ್ತಾಯಕ್ಕನ ಮದುವೆಯಾದ ಕೆಲ ದಿನಗಳಲ್ಲಿಯೇ ಅಜಗಣ್ಣ ಲಿಂಗೈಕ್ಯನಾಗುತ್ತಾನೆ. ಈ ಸುದ್ದಿ ಮುಕ್ತಾಯಕ್ಕನನ್ನು ದಿಗ್ಭ್ರಾಂತಗೊಳಿಸುತ್ತದೆ; ದಿಕ್ಕೆಡಿಸುತ್ತದೆ. ಗಂಡನ ಮನೆಯಿಂದ ಧಾವಿಸಿ ಬಂದ ಮುಕ್ತಾಯಕ್ಕ ಅಣ್ಣನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು, 'ಇಂತಪ್ಪ ಅಜಗಣ್ಣನೇನಡಗಿಸಿದನವ್ವಾ! ಧ್ಯಾನಿಸಿ ನೆನೆದಡೆ ಶೋಕಿಸಿದರೆಂಬೆಲೆ ಅವ್ವಾ! ಈ ಅಜಗಣ್ಣ ತಂದೆಯನಗಲಿ ನಾನೆಂತು ಸೈರಿಸುವೆನೆಲೆ ಸತ್ಯಕ್ಕ ತಾಯೆ ಆಹಾ!' ಎಂದು ಗೋಳಿಡುವ ಪರಿ ವಿಲಕ್ಷಣವಾದುದು. ಹೊನ್ನಿಗಾಗಿ ಅತ್ತವರು, ಹೆಣ್ಣಿಗಾಗಿ ಅತ್ತವರು, ಮಣ್ಣಿಗಾಗಿ ಅತ್ತವರು ಕೋಟಿ ಕೋಟಿಸ ಜನ. ಆದರೆ 'ಅಣ್ಣನ ಸಾವಿಗಾಗಿ ದುಃಖಿಸಿದ ವ್ಯಕ್ತಿಗೆ ಮುಕ್ತಾಯಕ್ಕನೋರ್ವಳೆ ಸರಿದೊರೆ' ಎನ್ನುವ ಮಾತು ಒಪ್ಪತಕ್ಕದ್ದೇ. ಮುಕ್ತಾಯಕ್ಕ ದುಃಖ ಮೇಲ್ನೋಟಕ್ಕೆ ಜನಸಾಮಾನ್ಯರಂತಿದ್ದರೂ ಅದು ಲೌಕಿಕ ದುಃಖವಲ್ಲ. ಆಧ್ಯಾತ್ಮಿಕ ಸಾಧನೆಗೆ ಮಾರ್ಗತೋರುವ ಗುರು ಇಲ್ಲದಾದಾಗ ಆ ಅಗಲಿಕೆಯ ನೋವು ಶೋಕವಾಗಿ ಪರಿಣಮಿಸಿದೆ.

ಇಂತಹ ತಲ್ಲಣದಲ್ಲಿ ಮೈಮರೆತಿರುವ ಮುಕ್ತಾಯಕ್ಕನನ್ನು ಮೇಲಕ್ಕೆತ್ತಿ ಸ್ವ–ರೂಪ ಜ್ಞಾನ ದೀಕ್ಷೆಯನ್ನು ಕೊಡುವುದೇ ವ್ಯೋಮಮೂರ್ತಿ ಅಲ್ಲಮಪ್ರಭುವಿನ ಉದ್ದೇಶ, ಅದಕ್ಕಾಗಿಯೇ ಲಕ್ಕುಂಡಿಗೆ ಆತನ ಆಗಮನ. ಪ್ರಲಾಪಿಸುತ್ತಿದ್ದ ಮುಕ್ತಾಯಕ್ಕನಿಗೆ, 'ಅಂಗೈಯೊಳಗೊಂದು ಅರಳ್ದ ತಲೆ ಹಿಡಿದು ಕಂಗಳ ಮುತ್ತು ಪವಣಿಸುವಾಕೆ ನೀನಾರು?' ಎಂದು ಕೇಳುತ್ತಾನೆ. ಅದಕ್ಕೆ ಮುಕ್ತಾಯಕ್ಕ

"ಆರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯವಿಲ್ಲ; ಭಾವದೊಳಗೆ ಭ್ರಮೆಯಿಲ್ಲ.
ಕರೆದು ಬೆಸಗೊಂಬಡೆ ಕುರುಹಿಲ್ಲ.
ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು
ನಿರ್ಬುದ್ಧಿಯಾದವಳನೇನೆಂಬೆನಣ್ಣಾ?
ತಲೆಯಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ
ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯ"[1]

ಎಂದು ತನ್ನ ಹಾಗೂ ಅಜಗಣ್ಣನ ಸಂಬಂಧವನ್ನು ವಿಷದಪಡಿಸುತ್ತಾಳೆ. ಆಕೆಯ ಅಂತರಂಗದ ನಿಲುವಿನ ಪರಿಯನ್ನರಿತ ಪ್ರಭುದೇವನು, 'ಶರಣನು ನಡೆದು ನಿರ್ಗಮನಿಯು, ನುಡಿದು ಮುಗ್ಧನು. ಅವನು ತನ್ನಲ್ಲಿ ತಾನು ತದ್ಗತನಾಗಿರುವುದರಿಂದ ನಿರ್ಲೇಪನು' ಎಂದು ಜೀವನ್ಮುಕ್ತನ ಸ್ಥಿತಿಯನ್ನು ಮನಗಾಣಿಸಿ, ಆಕೆಯ ಶೋಕವನ್ನು ಶಮನ ಮಾಡಿದ ರೀತಿ ಅನನ್ಯವಾದದ್ದು.

ಈ ಸಂದರ್ಭದಲ್ಲಿ ಮುಕ್ತಾಯಕ್ಕ ಅಲ್ಲಮನನ್ನು ಪ್ರಶ್ನಿಸುವ, ಸವಾಲು ಹಾಕುವ, ಚರ್ಚಿಸುವ, ಅವನನ್ನು ಹೀಗಳೆಯುವ, ತನಗೆ ಸಮ್ಮತವೆನಿಸಿದಾಗ ಮಾತ್ರ ಒಪ್ಪಿಕೊಳ್ಳುವ ಬಗೆ ಮಾತ್ರ ಅಸಾಧಾರಣವಾದುದು. 'ಶಿವಶರಣೆಯರ ಸಮುದಾಯದಲ್ಲಿ ಬೌದ್ಧಿಕ ಪ್ರಖರತೆಯಲ್ಲಿ ಅವಳ ಸಮಕ್ಕೆ ಬರುವ ಮತ್ತೊಬ್ಬ ವಚನಕಾರ್ತಿ ಪ್ರಾಯಶಃ ಮತ್ತೊಬ್ಬಳಿಲ್ಲ.

'ಅವಳೊಬ್ಬ ಪ್ರತ್ಯುತ್ಪನ್ನಮತಿ, ಅವಳ ಚಟುಲ ಮನಸ್ಸು ಅದ್ಭುತವಾದುದು" ಎಂಬ ವಿದ್ವಾಂಸರ ಪ್ರಶಂಸನೀಯ ನುಡಿಗೆ ಪಾತ್ರಳಾಗಿರುವ ಮುಕ್ತಾಯಕ್ಕನ ಸಂವಾದ ಸ್ವರೂಪದ ಕೆಲವು ವಚನಗಳನ್ನು ಈ ಕೆಳಗೆ ಪರಿಶೀಲಿಸಬಹುದಾಗಿದೆ.

"ಅರಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು
ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು
ನಾನೆಂತು ಬದುಕುವೆನಣ್ಣಾ ?
ಕತ್ತಲೆ ಬೆಳಗ ಕಾಂಬ ಸಂದೇಹಿ ನಾನೊಬ್ಬಳು
ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೋ ಅಜಗಣ್ಣಾ ನಿನ್ನ ಯೋಗ!"[2]

ಎಂದು, ಮುಕ್ತಾಯಕ್ಕ ಒಂದೇ ಮಾತಿನಲ್ಲಿ ಜ್ಞಾನ ಮತ್ತು ಮನುಷ್ಯರ ಮಧ್ಯದ ಕಂದಕದ ದುರಂತವನ್ನು ಚಿತ್ರಿಸುತ್ತಾಳೆ. ಜನರು ಜ್ಞಾನವನ್ನು ದವಡೆಯಲ್ಲೇ ಇಟ್ಟುಕೊಂಡು, ಬರಿಯ ಬಾಯನ್ನು ಅಗಿಯುತ್ತಿದ್ದಾರೆ. ಆದರೆ ಜ್ಞಾನ ಅವರ ಭಾಗವಾಗುತ್ತಿಲ್ಲ. ಅಗಿಯುವುದೂ ತಪ್ಪಿಲ್ಲ, ಹಸಿವೂ ಹಿಂಗುತ್ತಿಲ್ಲ! ಮನುಷ್ಯ ಬೌದ್ಧಿಕವಾಗಿ ಸಂಪಾದಿಸಿದ್ದನ್ನು ಜೀವನಕ್ಕೆ ಅನ್ವಯಿಸಿಕೊಳ್ಳದೇ ಹೋಗಿರುವ ದುರಂತ ಸ್ಥಿತಿಯಿದು! ಮುಕ್ತಾಯಕ್ಕ ತನ್ನ ಒಂದೊಂದು ಮಾತಿನಲ್ಲಿ ಇಡೀ ಲೋಕದ ಕಡೆ ತನ್ನ ದೃಷ್ಟಿ ಹಾಯಿಸಿ ಜೀವನವನ್ನು ಕುರಿತು ಗಂಭೀರವಾಗಿ ಚಿಂತಿಸುವ ಪರಿ ಇದು. ಆದರೆ ಅಜಗಣ್ಣನ ಯೋಗ ತನಗೆ ಅಂತರ್ಜ್ಞಾನವನ್ನು ತಂದುಕೊಟ್ಟು ತನ್ನ ಮನದ ಸಂದೇಹವನ್ನು ದೂರುಮಾಡಿದೆ ಎಂಬುದನ್ನು ಸ್ಪಷ್ಟಪಡಿಸುತ್ತಾಳೆ. ಅಲ್ಲಮಪ್ರಭು, 'ನಿನ್ನ ಅಣ್ಣನ ಸ್ಥಿತಿ ಸಾವಲ್ಲ, ಅದು ಐಕ್ಯ. ಆದ್ದರಿಂದ ದುಃಖವೇಕೆ? ಎಂದು ಸಮಾಧಾನದ ಮಾತುಗಳನ್ನು ಹೇಳಿದರೆ ಅದು ಅವಳಿಗೆ ಸಹ್ಯವಾಗುವುದಿಲ್ಲ. ಅಣ್ಣನ ಸಾವನ್ನು ಮುಕ್ತಾಯಕ್ಕ ಹೀಗೆ ಬಣ್ಣಿಸುತ್ತಾಳೆ.

"ನೀರ ಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ
ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು
ಮುದ್ದಾಡಿಸುತ್ತಿರ್ದೆನಯ್ಯಾ
ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ
ಅಗ್ನಿ ಕರಗಿ ಕರ್ಪೂರ ಉಳಿದುದಕ್ಕೆ ಬೆರಗಾದೆನಯ್ಯಾ
ಎನ್ನ ಅಜಗಣ್ಣನ ಯೋಗಕ್ಕೆ"[3]

ಈ ರೀತಿಯ ಅವಳ ಬೆಡಗಿನ ಭಾಷೆಗೆ ಅರ್ಥದ ಪದರುಗಳಿವೆ. ಅಜಗಣ್ಣ ತನ್ನ ಅನಿತ್ಯವಾದ ದೇಹಕ್ಕೆ ನಿರಾಕಾರದ ಗೆಜ್ಜೆಯನ್ನು ಕಟ್ಟಿ ಶೂನ್ಯದ ಕೈಯಲ್ಲಿ ಮುದ್ದಾಡಲು ಕೊಟ್ಟಿದ್ದನಂತೆ! ತನ್ನ ಪಂಚಭೂತಾತ್ಮಕವಾದ ದೇಹವೆಂಬ ಕರ್ಪೂರದ ಬೊಂಬೆಗೆ ಜ್ಞಾನಾಗ್ನಿ ಸಿಂಹಾಸನವಾಯ್ತು. ನ್ಯಾಯವಾಗಿ ಲೋಕದಲ್ಲಿ ಕರ್ಪೂರ ಕರಗುತ್ತದೆ, ಅಗ್ನಿ ಉರಿಯುತ್ತದೆ. ಆದರೆ ಇಲ್ಲಿ ವಿಪರೀತವಾಗಿದೆ! ಅಗ್ನಿಯೇ ಕರಗಿ, ಕರ್ಪೂರ ಉಳಿದಿದೆ. ಅಜಗಣ್ಣನ ಸಾವನ್ನು ನಿರೂಪಿಸುವ ಮುಕ್ತಾಯಕ್ಕನ ಬೆಡಗಿನ ರೀತಿ ಇದು. ಗುರು ಅಜಗಣ್ಣನು ಎಂತಹ ಆರೂಢ ಸ್ಥಲಕ್ಕೆ ಏರಿದ್ದನೆಂದರೆ ತಾನೊಬ್ಬರಿಗೆ ಹೇಳಲರಿಯನು. ಅವನದೆಲ್ಲವೂ ಗುಪ್ತ ಭಕ್ತಿ, ಗುಪ್ತಸಿದ್ಧಿ, ಮಹಾಮೌನಿ. ಇಂಥವನಿಂದ ಹಿತವಚನಗಳನ್ನು ಹೇಗೆ ಪಡೆಯುತ್ತಿದ್ದಳೆಂಬುದನ್ನು ಮುಕ್ತಾಯಕ್ಕ ಹೀಗೆ ವಿವರಿಸುತ್ತಾಳೆ.

"ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು.
ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು.
ದರ್ಪಣದೊಳಗಣ ಪ್ರತಿಬಿಂಬದಂತೆ
ಹಿಡಿವರಿಗಳವಲ್ಲದಿರಬೇಕು ಅಣ್ಣಾ

ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ

ಆರೂಢಗೆಟ್ಟಿಯೊ ಅಜಗಣ್ಣಾ"[4]

ಅಂಧಕನ ಕೈಯನ್ನು ಅಂಧಕ ಹಿಡಿಯುವುದು ಒಂದು ರೀತಿಯ ಹೆಚ್ಚಿನ ಭದ್ರತೆ. ಮೇಲ್ನೋಟಕ್ಕೆ ಅಂಧಕನಾಗಿದ್ದರೂ ಉಳಿದೆಲ್ಲ ಇಂದ್ರಿಯಗಳೂ ಜಾಗ್ರತ, ಜ್ಞಾನ ನೇತ್ರ ಸರ್ವಕಾಲಕ್ಕೂ ಪ್ರಕಾಶಿತ! ಗುರುವು ಶಿಷ್ಯನ ಕೈವಿಡಿದು, ಜ್ಞಾನ ನೇತ್ರದ ಬೆಳಕಿನಲ್ಲಿ ಮುನ್ನಡೆಸಿಕೊಂಡು ಹೋಗುವ ಸಹಚರಿ. ಈ ಅನುಭವ ಮುಕ್ತಾಯಕ್ಕನಿಗಾಗಿದೆ. ಅವರಿಬ್ಬರ ಸಂಬಂಧ 'ಅಂಧಕನ ಕೈಯ ಅಂಧಕ ಹಿಡಿದಂತಿತ್ತು. ಮೂಗನ ಕೈಯಲ್ಲಿ ಕಾವ್ಯವನ್ನು ಓದಿಸಿ ಅದರ ಭಾವವನ್ನು ಅರ್ಥ ಮಾಡಿಕೊಳ್ಳುವುದು ಇನ್ನೂ ವಿಶಿಷ್ಟ ! ಮಾತು ಬರುವವರು ಕಾವ್ಯ ಓದಿದರೆ ಶಬ್ದದ ವಾಚ್ಯಾರ್ಥಕ್ಕೆ ಮಾತ್ರ ಅವರ ಬುದ್ದಿ ಸೀಮಿತ. ಆದರೆ ಅನುಭಾವದ ಆಳಕ್ಕೆ ಶಬ್ದಗಳು ನಿಲುಕವು. ಅದನ್ನು ಅನುಭಾವದಲ್ಲಿಯೇ ಕೇಳಿ ಪರಿಣಮಿಸಿದ ಸ್ಥಿತಿಯು ಮುಕ್ತಾಯಕ್ಕನದಾಗಿದೆ. ಇನ್ನು ಗುರು–ಶಿಷ್ಯರ ಸಂಬಂಧವು ದರ್ಪಣ ಹಾಗೂ ಅದರೊಳಗಣ ಪ್ರತಿಬಿಂಬದಂತೆ ಎಂಬ ಹೋಲಿಕೆ ಅಸಾಮಾನ್ಯವಾಗಿದೆ. ಪ್ರತಿಬಿಂಬವನ್ನು ಹಿಡಿದುಕೊಳ್ಳುವುದು ದರ್ಪಣ ಬಿಟ್ಟರೆ ಯಾರಿಂದಲೂ ಸಾಧ್ಯವಿಲ್ಲ. ಸರ್ವ ಸಾಮರ್ಥ್ಯ ಮೂಲ ದರ್ಪಣದ್ದೇ ಆಗಿದೆ. ತನ್ನ ಅಜಗಣ್ಣ ಗುರುವಿನ ಅಗಾಧ ಸಾಮರ್ಥ್ಯಕ್ಕೆ ಆಕೆ ಕೊಡುವ ಹೋಲಿಕೆ ಗಮನಾರ್ಹವಾಗಿದೆ.

ಮೇಲಿನ ಮೂರು ಹೋಲಿಕೆಗಳಲ್ಲಿ ತನ್ನ ಗುರುವಿನ ಅನುಭಾವದ ಆಳವನ್ನು ಹೇಳುತ್ತಲೇ, ಮುಕ್ತಾಯಕ್ಕ ಮುಂದುವರಿದು ಆತನೊಡನಿದ್ದ ತನ್ನ ಸಂಬಂಧವನ್ನು ಇನ್ನೂ ಪರಿಣಾಮಕಾರಿಯಾಗಿ ನಿವೇದಿಸುತ್ತಾಳೆ. ಕೂರ್ಮ ಹಾಗೂ ಕೂರ್ಮದ ಶಿಶುವಿನ ಬಾಂಧವ್ಯ ಲೋಕದಲ್ಲಿ ಅತ್ಯಂತ ವಿಚಿತ್ರವಾದುದು. ತಾಯಿ ಕೂರ್ಮ ತನ್ನ ಮಗುವಿಗೆ ಗುಟುಕು ಕೊಡುವುದಿಲ್ಲ. ಕೇವಲ ಮಮತೆಯಿಂದ ನೋಡಿದರೆ ಸಾಕು, ಮಗುವಿನ ಹೊಟ್ಟೆ ತುಂಬುತ್ತದೆ. ಮರಿ ಕೂರ್ಮವೂ ಅಷ್ಟೇ. ತನಗೆ ಹಸಿವಾದಾಗ ತಾಯಿಯ ಹತ್ತಿರ ಹೋಗಬೇಕಾದುದಿಲ್ಲ. ದೂರದಿಂದಲೇ ತಾಯಿಯನ್ನು ವಾತ್ಸಲ್ಯದಿಂದ ನೋಡಿದರೆ ಅದರ ಹಸಿವು ಹಿಂಗುತ್ತದೆ. ಹಾಗೆ ಅಜಗಣ್ಣ ಮತ್ತು ಮುಕ್ತಾಯಕ್ಕನ ಗುರು–ಶಿಷ್ಯ ಸಂಬಂಧ ಕೂರ್ಮ–ಕೂರ್ಮನ ಶಿಶುವಿನ ಸಂಬಂಧದಂತೆ ಮಾತೃವಾತ್ಸಲ್ಯ ಭರಿತವಾಗಿತ್ತು, ಅದೀಗ ತಪ್ಪಿ ಹೋಯಿತಲ್ಲಾ ಎಂಬುದೇ ಮುಕ್ತಾಯಕ್ಕನ ಶೋಕ. ಇಂಥ ಸಮಯದಲ್ಲಿ ಅಲ್ಲಮಪ್ರಭುವಿನ ಬೋಧನೆ ಮುಕ್ತಾಯಕ್ಕನಿಗೆ ಹಿತವಾಗುವುದಿಲ್ಲ, ಅವನ ಮಾತುಗಳೆಲ್ಲ ಅವಳಿಗೆ ಕೇವಲ ವಾದಾತ್ಮಕವಾಗಿ ಕಾಣಿಸುತ್ತವೆ. ಅವನು ಹೇಳುವ ಐಕ್ಯ, ಅದ್ವೈತಗಳು ಅವನಿಗೆ ಸಿದ್ಧಿಸಿಲ್ಲವೆಂಬುದಕ್ಕೆ ಕುರುಹುಗಳು. ತನಗೆ ತಿಳಿವು ಹೇಳುವಷ್ಟು 'ಸಹಜ ಜ್ಞಾನ'ವೂ ಅಲ್ಲಮನಿಗೆ ಇಲ್ಲವೆಂದು, ಮುಕ್ತಾಯಕ್ಕ ಅವನನ್ನು ಸಂಪೂರ್ಣ ತಿರಸ್ಕರಿಸುವಷ್ಟು ದೂರ ಹೋಗುತ್ತಾಳೆ. ಅನುಭವಕ್ಕೆ ಬಾರದ, ಕೇವಲ ಬೌದ್ಧಿಕ ಮಟ್ಟದಲ್ಲೇ ಭಾಷೆಯನ್ನು ಬಳಸುವ, ಉಪದೇಶಿಸುವ ಅಲ್ಲಮನಿಗೆ

"ನಡೆದು ನಡೆದು ನಡೆಯ ಕಂಡವರು

ನುಡಿದು ನುಡಿದು ಹೇಳುತ್ತಿಹರೆ?

ನುಡಿದು ನುಡಿದು ಹೇಳುವನ್ನಕ್ಕರ

ನಡೆದುದೆಲ್ಲಾ ಹುಸಿಯೆಂಬೆನು

ಮಾತಿನ ಮಥನದಿಂದಾದ ಅರಿವು

ಕರಣಮಥನದಿಂದಾದುದಲ್ಲದೆ

ಅನುಪಮ ಸ್ವರಭೇದವಾದ ಪರಿ ಎಂತು ಹೇಳಾ?

ಇಹವ ಗೆಲಬೇಕೆಂದು ನುಡಿದುಕೊಂಡಡೇನು

ಮನಕ್ಕೆ ಮನವೆ ಸಾಕ್ಷಿಯಾಗಿ ನಿಃ ಪತಿಯಲ್ಲ ನೋಡಾ!

ಎನ್ನ ಅಜಗಣ್ಣ ತಂದೆ ಶಬುದಕ್ಕೆ ಹೇಸಿ ಮುಗುದನಾದನು"[5]

ಕಂಡವರಿಗೆ ಕಡಿಮೆ ಮಾತು, ಕಾಣದವರಿಗೆ ಕಂಡಾಬಟ್ಟೆ ಮಾತು; ಇದು ಲೋಕದಲ್ಲಿ ಎಲ್ಲ ಸನ್ನಿವೇಶಗಳಿಗೂ ಅನ್ವಯವಾಗುವ ಒಂದು ಸತ್ಯ. ಇದನ್ನು ಮುಕ್ತಾಯಕ್ಕ ಗುರುತಿಸಿದ್ದಾಳೆ. ಕೆಲವು ಉಪದೇಶಿಗಳು ತಮ್ಮ ನಡೆಯಲ್ಲಿ ಕಾಣಲಾರದ್ದನ್ನು ತಮ್ಮ ನುಡಿಗಳಿಂದ ತುಂಬಿಕೊಳ್ಳಬೇಕೆನ್ನುತ್ತಾರೆ. ಮಾತುಗಳ ಮಥನದಿಂದಾದ ಅರಿವು ನಮ್ಮ ಕರಣ (ಇಂದ್ರಿಯ) ಮಥನದಲ್ಲಿ ಇಳಿಯಲೇಬೇಕಾಗುತ್ತದೆ. ಅರಿವು ಆಚಾರದಲ್ಲಿ ಪರಿವರ್ತನೆ ಆದಾಗಲೇ ಅದಕ್ಕೆ ಮಹತ್ವ, ಶಬ್ದ ಮೋಡಿ ವರದಾನವಾಗಿ ದೊರಕಿರುವ ಕೆಲವರು ಮತ್ತೊಬ್ಬರನ್ನು ಸೋಲಿಸಬೇಕೆಂದು ಅಥವಾ ಅವರ ಮನಸ್ಸನ್ನು ಗೆಲ್ಲಬೇಕೆಂದು ಸ್ವರ ವ್ಯತ್ಯಾಸ ಮಾಡಿ, ಧಾಟಿ ಬದಲಿಸಿ, ಹಲವು ಹಾವ–ಭಾವಗಳನ್ನು ಮುಖದಲ್ಲಿ ತಂದುಕೊಂಡು, ಅವಶ್ಯಕತೆಗಿಂತ ಹೆಚ್ಚು ಮಾತನಾಡುವವರಿಗೆ 'ಅನುಪಮ ಸ್ವರ ಭೇದವಾದ ಪರಿಯೆಂತು ಹೇಳಾ' ಎಂದು ಖಂಡಿಸುತ್ತಾಳೆ. ಅಂತಹ ಸ್ವರರಂಜಿತ ಮಾತುಗಳು ಅಜ್ಞಾನದ ಅಭಿವ್ಯಕ್ತಿಯೆಂದೇ ತನ್ನ ಅಜಗಣ್ಣ ತಂದೆ ಶಬ್ದ ಮುಗ್ಧನಾಗಿದ್ದನಲ್ಲವೆ! ನುಡಿಯು ಪೂರ್ಣ ಮೌನವಾಗಿ ನಡೆಯೇ ನಮ್ಮ ವ್ಯಕ್ತಿತ್ವವನ್ನು ಪ್ರತಿನಿಧಿಸಬೇಕೆಂದು ಹೇಳುವ ಮುಕ್ತಾಯಕ್ಕ, ತನ್ನ ಅಣ್ಣ ಅಜಗಣ್ಣ ಮಾತು–ಮೌನಗಳೆರಡನ್ನೂ ಗೆದ್ದು ಸಮತೆಯಾಗಿ ನಿಂದವನು ಎಂದು ಅವನ ನಿಲುವನ್ನು ವರ್ಣಿಸುತ್ತಾಳೆ.

"ಜಲದ ಚಿತ್ತಾರದ ಕೊರಳಿನಲ್ಲಿ
ದಾರವಿಲ್ಲದ ಮುತ್ತಿನ ಸರವು ನೋಡಾ!
ಚಿತ್ತಾರವಳಿಯದೆ, ಮುತ್ತು ಉಳಿಯದೆ
ನಿಂದ ನಿಲವಿನ ಪರಿಯ ನೋಡಾ!
ಗಮನವಿಲ್ಲದ ಗಂಭೀರ, ಶಬುದವಿಲ್ಲದ ಸಾರಾಯ
ಸಮತೆಯಾಗಿ ನಿಂದ ಅಜಗಣ್ಣಂಗೆ
ಇನ್ನಾರು ಸರಿ ಎಂಬೆನು?"[6]

ಇಲ್ಲಿ ಸಮತೆ ಎಂಬುದು ಮುಕ್ತಾಯಕ್ಕ ಮಾತುಗಳಲ್ಲಿ ಸ್ಥಿತಪ್ರಜ್ಞತೆ ಎಂದರ್ಥ. ಮುಕ್ತಾಯಕ್ಕಗಳ ಆಧ್ಯಾತ್ಮಿಕ ಔನ್ನತ್ಯವನ್ನು ಕಂಡು ತಲೆದೂಗಿದ ಅಲ್ಲಮನು 'ತನ್ನ ತಾನರಿದಡೆ ನುಡಿಯೆಲ್ಲಾ ಪರತತ್ವ ನೋಡಾ, ತನ್ನ ತಾ ಮರೆದಡೆ ನುಡಿಯೆಲ್ಲಾ ಮಾಯೆ ನೋಡಾ' ಎಂದು ನುಡಿಯನ್ನು ಸಮರ್ಥಿಸಿ, 'ಮಾತೆಂಬುದು ಜ್ಯೋತಿರ್ಲಿಂಗ'ವೆಂದು ನಂಬುವ ಶರಣರು ಶಬ್ದ ಸೂತಕಿಗಳಲ್ಲವೆಂದು ಸ್ಪಷ್ಟಪಡಿಸುತ್ತಾನೆ. ಅಲ್ಲಮನ ಹಿರಿಮೆಯನ್ನು ಮುಕ್ತಾಯಕ್ಕ ಕೊನೆಗೆ ಒಪ್ಪಿಕೊಳ್ಳುತ್ತಾ,

"ದೇವ ದೇವ ಶರಣು ಶರಣಾರ್ಥಿ, ಅವಧರಿಸಯ್ಯಾ.
ಕೇಳಿದ ಸುಖ ಕಿವಿಗೆ ಬೇಟವಾಯಿತ್ತು.
ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತು.
ಕಂಗಳ ಮುಂದೆ ಕಂಡ ಸುಖವು ಮನಕ್ಕೆ ವೇದ್ಯವಾಯಿತ್ತು.
ಶಿವಶರಣರ ದರುಶನದ ಸುಖವೇನೆಂದೆನಬಹುದು?
ಮದವಳಿದು ಮಹವನೊಡಗೂಡಿದ
ಎನ್ನ ಅಜಗಣ್ಣನನಗಲಿದ ದುಃಖ
ನಿಮ್ಮ ಸಂಗದಲ್ಲಿ ಸಯವಾಯಿತ್ತು ಕಾಣಾ ಪ್ರಭುವೆ"[7]

ಎಂದು, ಗುರು ಅಜಗಣ್ಣನನ್ನಗಲಿದ ದುಃಖವನ್ನು, ಅಣ್ಣನಾಗಿ ಬಂದ ಅಲ್ಲಮಪ್ರಭುವಿನಲ್ಲಿ ನೀಗುತ್ತಾಳೆ. ಸಮಕಾಲೀನ ಹಿರಿಯ ಶರಣರ ಬಗೆಗೆ ಅದಮ್ಯ ಗೌರವವನ್ನು ತಾಳಿದ್ದಾಳೆ ಮುಕ್ತಾಯಕ್ಕ, ತನ್ನ ಭಾವಕ್ಕೆ ಗುರುವಾದ ಬಸವಣ್ಣ, ನೋಟಕ್ಕೆ ಲಿಂಗವಾದ ಚೆನ್ನಬಸವಣ್ಣ, ಜ್ಞಾನಕ್ಕೆ ಜಂಗಮನಾದ ಪ್ರಭುದೇವ, ಪರಿಣಾಮಕ್ಕೆ ಪ್ರಸಾದವಾದ ಮರುಳಶಂಕರದೇವ, ಹೃದಯಕ್ಕೆ ಮಂತ್ರವಾದ ಮಡಿವಾಳಯ್ಯ ಇವರ ಬಗೆಗೆ ಕೃತಜ್ಞತಾ ಭಾವವನ್ನು ಸೂಚಿಸುತ್ತಾಳೆ.

ಇಂತಹ ಮಹಾಶರಣರ ಸಾಮಿಪ್ಯದಲ್ಲಿ, ಅವರಿಂದ ಗುರು–ಲಿಂಗ–ಜಂಗಮ–ಮಂತ್ರ–ಪ್ರಸಾದ ತತ್ವಗಳ ನೆಲೆಯನ್ನರಿತುಕೊಂಡು ತಾನು ಏಕಾಕಿಯಲ್ಲ ಎಂದು ಧೈರ್ಯವಾಗಿ ನುಡಿಯುತ್ತಾಳೆ.

"ಆರೂ ಇಲ್ಲದವಳೆಂದು ಆಳುಗೊಳಿಲು ಬೇಡ

ಆಳಿಗೊಂಡಡೆ ಅನು ಅಂಜವಳಲ್ಲ

ಒಲವಿನ ಒತ್ತೆಕಲ್ಲನು ಬೆವರಿಸಬಲ್ಲೆ ಕಾಣಿರೂ"[8]

ಎಂದು, ಯಾರೂ ಇಲ್ಲದವಳೆಂದು ತನ್ನನ್ನು ತಿರಸ್ಕರಿಸಿದರೆ ತಾನು ಕೇಳುವವಳಲ್ಲ, ಅಂಜುವವಳಲ್ಲ, ಕಲ್ಲನ್ನೂ ಕರಗಿಸಬಲ್ಲೆ ಎಂದು ಸವಾಲು ಹಾಕುವಲ್ಲಿ ಆಕೆಯ ಆತ್ಮವಿಶ್ವಾಸ, ಸಾತ್ವಿಕ ಕೆಚ್ಚು ಹೆಡೆಯೆತ್ತುತ್ತದೆ. ಮುಕ್ತಾಯಕ್ಕನಿಗೆ ಭಾಷೆಯನ್ನು ದುಡಿಸಿಕೊಳ್ಳುವ ಸಾಧ್ಯತೆಗಳು ತಿಳಿದಿವೆ. ಅವಳ ಆಲೋಚನೆಯಷ್ಟೇ ಅವಳ ಭಾಷೆಯೂ ಸ್ಪಟಿಕದಂತೆ ಸ್ಪಷ್ಟ, ಸ್ವಚ್ಛ, ಕತ್ತಿಯಂತೆ ಹರಿತವಾಗಿವೆ. ಅದರೊಟ್ಟಿಗೆ ಭಾವಸೌಂದರ್ಯದ ಸಾಹಿತ್ಯಕ ಆವರಣವನ್ನು ಕಟ್ಟಿಕೊಟ್ಟಿವೆ. 'ವಾರಿಕಲ್ಲ ಕೊಡದಲ್ಲಿ ಮುತ್ತು ಮಾಣಿಕ್ಯವ ತುಂಬಿ ಎತ್ತುವರಿಲ್ಲದೆ ಸಖಿಯರನರಸುತ್ತಿಪ್ಪೆ.' 'ಸಾಕಾರವಲ್ಲದ ನಿರಾಕಾರಲಿಂಗವು ವ್ಯಾಕುಲವುಳ್ಳನ್ನಕ್ಕ ಸಾಧ್ಯವಾಗದು' ಮೊದಲಾದ ಬೆಡಗಿನ ಮಾತುಗಳು ಆಕೆಯ ಅನುಭಾವದ ಎತ್ತರವನ್ನು ಸೂಚಿಸಿದರೆ, 'ಸಿಡಿಲು ಹೊಯ್ದ ಬಾವಿಗೆ ಸೋಪಾನವುಂಟೆ.' 'ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನ್ನಿಕ್ಕಿ.' ಮೂಗನ ಕೈಯಲ್ಲಿ ಕಾವ್ಯವ ಕೇಳಿಸಿದಂತಿರಬೇಕು, ಉಟ್ಟುದ ತೊರೆದವಂಗೆ ಊರೇನು ಕಾಡೇನು', 'ದೂರದಲ್ಲಿ ಹೋದವ ಊರ ಸುದ್ದಿಯನರಿಯ' ಮೊದಲಾದ ವಾಕ್ಯಗಳು ಆಕೆಯ ಅಭಿವ್ಯಕ್ತಿಯ ಸೂಕ್ಷ್ಮ ಪದರುಗಳನ್ನು ಬಿಡಿಸಿ ತೋರಿಸುತ್ತವೆ.

ಒಟ್ಟಾರೆ, ತನ್ನ ಅಂತರಂಗದ ಕಣ್ತೆರಿಸಿದ ತನ್ನಣ್ಣ–ಗುರು–ಅಜಗಣ್ಣನ ಬಗೆಗೆ ಅಪಾರ ಗೌರವ, ತಾನರಿತ ತತ್ವ ನಂಬಿಕೆಗಳ ಬಗೆಗೆ ದೃಢವಾದ ನಿಲುವು, ಮೇರು ಸದೃಶ ವ್ಯಕ್ತಿತ್ವದ ಮಹಾಜ್ಞಾನಿ ಅಲ್ಲಮನ ಮಾತುಗಳನ್ನು ಒರೆಗೆ ಹಚ್ಚುವ ದಿಟ್ಟ ಮನೋಭಾವ ಈ ತ್ರಿಕೂಟ ಗುಣಗಳ ಮೂರ್ತಿಯೇ ಮುಕ್ತಾಯಕ್ಕ. ಆಕೆ ಮುಖ್ಯವಾಗಿ ಬುದ್ಧಿಜೀವಿ ಭಾವಜೀವಿ. ಇಂತಹ ವೀರ, ವಿರಳ ಮಹಿಳೆಯ ಕುರಿತಾಗಿ ಡಾ.ಎಚ್. ತಿಪ್ಪೇರುದ್ರಸ್ವಾಮಿಯವರು 'ಮುಕ್ತಾಯಕ್ಕನ ವ್ಯಕ್ತಿತ್ವ ಮಹಿಳಾ ಸಾಧಕಿಯರ ಅಗ್ರಪಂಕ್ತಿಯಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಿದೆ' ಎಂದಿದ್ದರೆ, ಡಾ. ಸಿದ್ದಯ್ಯ ಪುರಾಣಿಕರು 'ಮುಕ್ತಾಯಕ್ಕ ಅಂಗನೆಯರ ಇತಿಹಾಸದಲ್ಲಿಯೇ ಅಪೂರ್ವವ್ಯಕ್ತಿ. ಗಾರ್ಗಿಯ ಸಂವಾದ ಶಕ್ತಿ, ಮಹಾದೇವಿಯ ವಿರಕ್ತಿ, ದ್ರೌಪದಿಯ ಅಗ್ರಜಾನುರಕ್ತಿ, ಮೈತ್ರೇಯಿಯ ಆತ್ಮದರ್ಶನಾ ಶಕ್ತಿ, ಏಕಲವ್ಯನ ಗುರುಭಕ್ತಿಗಳೆಲ್ಲ ಸೇರಿ ಮುಕ್ತಾಯಿಯಾಗಿ ಮೂರ್ತಿಭ್ರವಿಸಿದಂತಿದೆ' ಎಂದು ಅಭಿಪ್ರಾಯ ಪಟ್ಟಿದ್ದು ಸಹಜವಾಗಿದೆ.

**ಕೊನೆಯ ಟಿಪ್ಪಣಿ:**


1. ವೀರಣ್ಣ ರಾಜೂರ, (ಸಂ), ಶಿವಶರಣೆಯರ ವಚನ ಸಂಪುಟ–5, ಪುಟ–395.
2. ಅದೇ, ಪುಟ–393
3. ಅದೇ, ಪುಟ–402
4. ಅದೇ, ಪುಟ–393
5. ಅದೇ, ಪುಟ–401
6. ಅದೇ, ಪುಟ–399
7. ಅದೇ, ಪುಟ–401
8. ಅದೇ, ಪುಟ–395